# ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್

**ಮೌಲ್ಯ** –"ಆದರ್ಶ ವ್ಯಕ್ತಿತ್ವವುಳ್ಳ ವ್ಯಕ್ತಿಗಳ ವಿಚಾರಗಳು ಮತ್ತು ಚಿಂತನೆಗಳು ಜೀವನಕ್ಕೆ ಸ್ಪೂರ್ತಿದಾಯಕವಾಗಿರುತ್ತವೆ"

ಪ್ರಸ್ತುತ ಗದ್ಯ ಸಮಿತಿ ರಚನೆಯಾಗಿದೆ

ಪ್ರಕೃತ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ವ್ಯಕ್ತಿಚಿತ್ರ ಗದ್ಯ ಭಾಗವನ್ನು ಕೆ.ಎಸ್ . ರತ್ನಮ್ಮ ಅವರ ಡಾ. ಎಸ್.ರಾಧಾಕೃಷ್ಣನ್ –ಜೀವನ ಸಾಧನೆ ಮತ್ತು ಎ. ಎನ್. ಮೂರ್ತಿರಾವ್ ಅವರ ಚಿತ್ರಗಳು –ಪತ್ರಗಳು ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾಸಮಿತಿ ಸಿದ್ಧಪಡಿಸಿ, ನಿಗದಿ ಮಾಡಿದೆ.

***ಪದಗಳ ಅರ್ಥ**

1. ಗ್ರಹಣ ಶಕ್ತಿ – ವಿಷಯವನ್ನು ತಿಳಿದುಕೊಳ್ಳುವ ಸಾಮರ್ಥ್ಯ
2. ಅಮರ – ಶಾಶ್ವತ
3. ಬುನಾದಿ – ತಳಹದಿ, ಅಡಿಪಾಯ
4. ಬೆರಗು – ಆಶ್ಚರ್ಯ
5. ಭಾವೋದ್ರೇಕ – ಭಾವನಾ ಪರವಶತೆ
6. ಮೊಳಗು – ಧ್ವನಿ ಮಾಡು
7. ಅನುಪಮ – ಎಣೆಯಿಲ್ಲದ
8. ಬೇಗೆ – ಸಂಕಟ
9. ಮಂತ್ರಮುಗ್ಧ – ಮೌನ, ಆಶ್ಚರ್ಯಚಕಿತ
10. ವ್ಯಾಪಕ – ವಿಸ್ತಾರವಾದ

**ಪ್ರಶ್ನೆ ಅ ಒಂದು ವಾಕ್ಯದಲ್ಲಿ ಉತ್ತರಿಸಿ.**

**1.ರಾಧಾಕೃಷ್ಣನ್ ಅವರ ತಂದೆ –ತಾಯಿಯವರ ಹೆಸರೇನು?**

**ಉತ್ತರ –** ರಾಧಾಕೃಷ್ಣನ್ ಅವರ ತಂದೆ ಹೆಸರು– ವೀರಸ್ವಾಮಿ ತಾಯಿ ಹೆಸರು – ಸೀತಮ್ಮ.

**2.ರಾಧಾಕೃಷ್ಣನ ಅವರ ತಂದೆಯ ಅಪೇಕ್ಷೆ ಏನಾಗಿತ್ತು?**

**ಉತ್ತರ–** ರಾಧಾಕೃಷ್ಣನ ಅವರ ತಂದೆಗೆ ತನ್ನ ಮಗನು ದೇಶಿ ಭಾಷೆಯಿಂದ ಸಂಸ್ಕೃತವನ್ನು ಕಲಿಯಲಿ ಎಂಬ ಅಪೇಕ್ಷೆಯಿತ್ತು.

**3.ರಾಷ್ಟ್ರಪತಿಗಳಾಗಿ ಪಡೆಯುತ್ತಿದ್ದ ವೇತನವನ್ನು ರಾಧಾಕೃಷ್ಣನ್ ಅವರು ಸದುಪಯೋಗಪಡಿಸಿಕೊಂಡರು?**

**ಉತ್ತರ–** ಹತ್ತು ಸಾವಿರ ರೂಪಾಯಿ ವೇತನದಲ್ಲಿ ಎರಡು ಸಾವಿರದಾ ಐನೂರು ರೂಪಾಯಿಗಳನ್ನು ಮಾತ್ರ ಪಡೆದು ಉಳಿದ ಹಣವನ್ನು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು.

**4.ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತದೆ?**

**ಉತ್ತರ–** ರಾಧಾಕೃಷ್ಣನ್ ಅವರ ಜನ್ಮದಿನವನ್ನು 'ರಾಷ್ಟ್ರೀಯ ಶಿಕ್ಷಕರ ದಿನ' ಎಂಬ ಹೆಸರಿನಿಂದ ಆಚರಿಸಲಾಗುತ್ತದೆ.

**ಪ್ರಶ್ನೆ ಆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು –ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. **ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?**

ಉತ್ತರ– ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು. ನೀವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ. ನನಗೆ ಇದು ದುಃಖ ನೀಡಿದೆ. ನೀವು ಹೆಚ್ಚು ಕಾಲ ಬಾಳಬೇಕೆಂಬುದೇ ನನ್ನಾಸೆ ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಹೇಳಿದರು.

**2.ರಾಧಾಕೃಷ್ಣನ್ ಅವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು?**

ಉತ್ತರ– ರಾಧಾಕೃಷ್ಣನ್ ಅವರ ವಿಧ್ಯಭ್ಯಾಸವು ತಿರುಪತಿಯ ಹರ್ಮನ್ಸ್ ಬರ್ಗ್ ಮಿಷನರಿ ಶಾಲೆಯಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದರು.

*ವೆಲ್ಲೂರಿನ ಮೂರ್ ಕಾಲೇಜಿಗೆ ಬಿ .ಎ. ಪದವಿ ಪೂರ್ವದ ಎರಡು ವರ್ಷಗಲ ಕಲಾ ಪದವಿಗೆ ಸೇರಿದರು.

*ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿಗೆ ಸೇರಿದರು.

*ತಮ್ಮ ಆಸಕ್ತಿಯ ವಿಷಯವಾದ ತತ್ವಶಾಸ್ತ್ರದಲ್ಲಿ ಎಂ. ಎ ಪದವಿಯನ್ನು ಪಡೆದರು.

**3.ರಾಧಾಕೃಷ್ಣನ್‌ನವರ ವೇಷ ಭೂಷಣಗಳ ಬಗ್ಗೆ ಬರೆಯಿರಿ?**

ಉತ್ತರ– ರಾಧಾಕೃಷ್ಣನ್ ಅವರದು ಬಾಹ್ಯರೂಪ ,ಎತ್ತರವಾದ ನಿಲುವು, ಬಿಸ್ಕೇಟ್ ಬಣ್ಣದ ರೇಷ್ಮೇಯ ನಿಲುವಂಗಿ ,ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು ಕೋಪ ಸೂಚಕವಲ್ಲದ ಹುಬ್ಬು , ಯಾವದೋ ಸಮಸ್ಯೆಯ ಒಳ ಹೋಗುವಂತಿರುವ ಕಣ್ಣ ನೋಟ, ಮುಗುಳ್ನಗೆಯ ಸುಳಿವು ಇವು ಭಾರತೀಯರೆಲ್ಲರಿಗೂ ಪರಿಚಿತ. ಪ್ರಪಂಚದ ಫ್ಯಾಷನ್ ಎಷ್ಟೇ ಬದಲಾಯಿಸಿದರೂ ರಾಧಾಕೃಷ್ಣನ್ ತಮ್ಮ ವೇಷಭೂಷಣಗಳನ್ನು ಕೊನೆವರೆಗೂ ಜತನವಾಗಿ ಉಳಿಸಿಕೊಂಡಿದ್ದರು.

**4.ಶಿಕ್ಷಣದ ಮಹತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?**

**ಉತ್ತರ–** ಶಿಕ್ಷಣದ ಮಹತ್ವವನ್ನು ಮನಗಂಡ ಇವರು "ಶಿಕ್ಷಣ ಜೀವನದ್ಯ  ಅವಿಭಾಜ್ಯಅಂಗ. ಅದು ಮಾನವನನ್ನು ಪರಿಪೂರ್ಣತೆ ಹಾಗೂ ಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ" ಎಂದಿದ್ದಾರೆ. ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣಗಳಲ್ಲಿ "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ" ಎಂದು ತಮ್ಮ ನಿಲುವನ್ನು ಅಭಿವ್ಯಕ್ತಿಸಿದರು.

**5. ರಾಧಾಕೃಷ್ಣನ್ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಯಾವವು?**

**ಉತ್ತರ–** ಇವರ ಸ್ಮರಣೀಯ ಸೇವೆಯನ್ನು ಗುರುತಿಸಿ–

* ಭಾರತ ಸರ್ಕಾರದ ಅತ್ಯುತ್ತಮ ಪ್ರಶಸ್ತಿಯಾದ 'ಭಾರತ ರತ್ನ' ನೀಡಿ ಗೌರವಿಸಲಾಯಿತು.

* ಬ್ರುಸೆಲ್ಸನ ಫ್ರಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್

*ಭಾರತೀಯ ವಿಧ್ಯಾಭವನದ 'ಬ್ರಹ್ಮ ವಿಧ್ಯಾಭಾಸ್ಕರ್' ಬಿರುದು

*ಭಾರತ ಸರಕಾರ ಸೆಪ್ಟೆಂಬರ್ 5ರಂದು ಡಾ. ರಾಧಾಕೃಷ್ಣನ್ ಅವರ ಜನ್ಮದಿನವನ್ನು 1962 ರಿಂ 'ರಾಷ್ಟೀಯ ಶಿಕ್ಷಕರ ದಿನ' ಎಂದು ಘೋಷಿಸಿತು.

**ಪ್ರಶ್ನೆಇ ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**ಪ್ರ1 ರಾಧಾಕೃಷ್ಣನ್ ಅವರು ಅಧ್ಯಾಪಕಾರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.**

ಉತ್ತರ– ರಾಧಾಕೃಷ್ಣನ್ ಅವರು ಶಿಕ್ಷಣ ಇಲಾಖೆಯ ಉಪಸಹಾಯಕ ಇನ್ಸಪೆಕ್ಟರ್ ಆಗಿ ಮದ್ರಾಸಿನಲ್ಲಿ ಸೇವೆ ಆರಂಭಿಸಿದರು. ಅನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು, ಆಂಧ್ರದ ಅನಂತಪುರ ಹಾಗೂ ರಾಜಮಂಡ್ರಿಯ ಸರ್ಕಾರಿ ಕಲಾಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಉಪ ಪ್ರಾಧ್ಯಾಪಕರಾಗಿ ಸಲ್ಲಿಸಿದ ಸೇವೆ ಸರಣೀಯ. ಇದಲ್ಲದೆ ಆಂಧ್ರ, ದೆಹಲಿ, ಬನಾರಸ್ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳಾಗಿ ಸೇವೆ ಸಲ್ಲಿಸಿ ಅವುಗಳ ಅಭಿವೃದ್ಧಿಗೆ ಶ್ರಮಿಸಿದರು. ಆಕ್ಸಫರ್ಡ್ ವಿಶ್ವವಿದ್ಯಾಲಯದಲ್ಲೂ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ರಾಧಾಕೃಷ್ಣನ್ ಅವರ ಭೋಧನಾ ಶೈಲಿ ,ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು.

**2.ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ?**

**ಉತ್ತರ–** ರಾಧಾಕೃಷ್ಣನ್ ಮೈಸೂರಿನಿಂದ ಹೊರಟ ಅವರಿಗೆ ಕೊಟ್ಟಂತಹ ವೈಭವದ ಬೀಳೊಡ್ಕುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದು. ಅಂದಿನ ವಾತಾವರಣದಲ್ಲಿದ್ದುದ್ದು ವೈಭವಕ್ಕಿಂತ ಹೆಚ್ಚಾಗಿ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರುಪ್ರೇಮ ವಿಧ್ಯಾರ್ಥಿಗಳೆಲ್ಲರೂ ಭಕ್ತಿ ಪ್ರೇಮದ ಚಿಲುಮೆ ಉಕ್ಕಿ ಬಂತು. ರಾಧಾಕೃಷ್ಣನ್ ಅವರನ್ನು ಮಹಾರಾಜ ಕಾಲೇಜಿನಿಂದ ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆ ಕುದುರೆಯನ್ನು ಕಟ್ಟಲಿಲ್ಲ ಸ್ವತಃ ವಿದ್ಯಾರ್ಥಿಗಳೇ ಎಳೆದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್‌ಮೆಂಟನ್ನು ಒರಗುದಿಂಬು ಹಾಗು ರತ್ನಗಂಬಳಿ ಹಾಸಿ ಮಲಗುವ ಸೀಟನ್ನು ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ ದೈವಮಂದಿರವನ್ನು ಭಕ್ತರು ಅಲಂಕರಿಸುವಂತೆ ಅಲಂಕರಿಸಲಾಗಿತ್ತು. 'ರಾಧಾಕೃಷ್ಣನ್ ಅವರಿಗೆ ಜಯವಾಗಲಿ' ಎಂಬ ಕೂಗು ರೈಲ್ವೇ ಸ್ಟೇಷನ್ನಿನ ಆವರಣದಲ್ಲೆಲ್ಲ ಮೊಳಗುತ್ತಿತ್ತು. ಆ ದಿನ ಭಾವೋದ್ರೇಕದಿಂದ ಅದೆಷ್ಟು ಜನ ಅತ್ತರೋ ವಿದ್ಯಾರ್ಥಿಗಳು ತೋರಿದ ವಿಶ್ವಾಸ ಅವರ ಕಣ್ಣಿನಲ್ಲೂ ನೀರು ತಂದಿತು.

**3.ಹಿಂದೂ ಧರ್ಮ ಮತ್ತು  ತತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅಭಿಪ್ರಾಯವೇನು? ವಿವರಿಸಿ.**

**ಉತ್ತರ–** ರಾಧಾಕೃಷ್ಣನ್ ಅವರು ಹಿಂದೂ ಧರ್ಮ ಮತ್ತು ತತ್ವಶಾಸ್ತ್ರ , ಸಾಹಿತ್ಯವನ್ನೆಲ್ಲ ಅಧ್ಯಯನ ಮಾಡಿದರು. ಯೂರೋಪಿಯನ್ ತತ್ವಶಾಸ್ತ್ರ ಮತ್ತು ಸಾಹಿತ್ಯದ ಅಭಿವ್ಯಕ್ತಿ ವಿಚಾರಗಳಿಂದ ಅವರ ವಿಶ್ವದೃಷ್ಟಿ ಮತ್ತು ತಾತ್ವಿಕ ದೃಷ್ಟಿಕೋನ ಪ್ರಭಾವವಾಯಿತು. ಸ್ವಾಮಿ ವಿವೇಕಾನಂದರ ವಿಚಾರಧಾರೆ ಅವರ ಮನವನ್ನು ಆಕರ್ಷಿಸಿತು. ಅವರು "ಹಿಂದೂ ಧರ್ಮವು ಒಂದು ವೈಚಾರಿಕ ಜೀವನ ಮಾರ್ಗವೆಂದೂ ನೈತಿಕ ಗುಣಾತ್ಮಕ ವಿಷಯಗಳಿಂದ ಕೂಡಿದ್ದು. ಮಾನವನ ಆತಂರಿಕ ಜೀವನದ ಬಗ್ಗೆ ಪ್ರಾಮುಖ್ಯತೆವುಳ್ಳದ್ದಾಗಿದೆ. "ಹಿಂದೂ ಧರ್ಮವಾಗಲಿ, ವೇದಾಂತವಾಗಲಿ ಅಸತ್ಯವನ್ನು ಹೇಳುವುದಿಲ್ಲ. ಭಾರತೀಯ ಚಿಂತನೆಗಳು

ಯಾವುದೋ ವಿಚಿತ್ರ ಮತ್ತು ನಿಗೂಢ ಪರಿಕಲ್ಪನೆಗಳಾಗಿಲ್ಲ. ಜೀವನದ ನಾಡಿ ಮಿಡಿತಗಳನ್ನು ಸೂಕ್ಷ್ಮ ಮನಸ್ಸಿನ ಚಿಂತನೆಗಳನ್ನು ತಿಳಿಯಪಡಿಸುವುದಾಗಿದೆ." ಎಂದು ಸರಳವಾಗಿ ಹೇಳಿದರು.

ಪ್ರಶ್ನೆ ಈ ಸಂದರ್ಭ

1. **"ನೀವೊಬ್ಬರೇ ನನ್ನನ್ನು ಮನುಷ್ಯರಂತೆ ಕಂಡಿರಿ"**

**ಆಕರ–** ಪಠ್ಯಪುಸ್ತಕ ರಚನಾಸಮಿತಿ ಸಿದ್ಧಪಡಿಸಿರುವ 'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ– ಈ ಮಾತನ್ನು ರಷ್ಯಾದ ಅಧ್ಯಕ್ಷರಾದ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರನ್ನು ಬೀಳ್ಕೊಡುವ ಸಂದರ್ಭದಲ್ಲಿ ಹೇಳಿದರು. ಭಾರತದ ರಾಯಭಾರಿಯಾಗಿದ್ದ ರಾಧಾಕೃಷ್ಣನ್ ಅವರು ಸ್ಟಾಲಿನ್ ಅವರೊಡನೆ ನಡೆದುಕೊಂಡ ರೀತಿಯನ್ನು ಸ್ಮರಿಸುತ್ತಾ ಈ ರೀತಿ ಹೇಳಿದ್ದಾರೆ.

ಸ್ವಾರಸ್ಯ – ಸ್ಟಾಲಿನ್ ಅವರ ಈ ಮಾತಿನಲ್ಲಿ ರಾಧಾಕೃಷ್ಣನ್ ಅವರ ಸ್ನೇಹಪರತೆ, ಸನ್ನಡತೆಗಳು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**2.ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ"**

**ಆಕರ–**

**ಸಂದರ್ಭ–** ರಾಧಾಕೃಷ್ಣನ್ ಅವರು ವಿದ್ಯಭ್ಯಾಸ ಮಾಡುತ್ತಿದ್ದಾಗ ಅವರ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಅದರೂ ಅವರ ಸಾಧನೆಗೆ ಅಡ್ಡಿಉಂಟು ಮಾಡಲಿಲ್ಲ.ಮನೆಯ ಜವಾಬ್ದಾರಿ ಹೊತ್ತ ಅವರು ಕಿರಿಯ ಸಹಪಾಠಿಗಳಿಗೆ ಮನೆಯ ಪಾಠ ಹೇಳಿ ಹಣಗಳಿಸುತ್ತಿದ್ದರು. ಬಡತನದಲ್ಲಿದ್ದರೂ ತತ್ವಶಾಸ್ತ್ರದಲ್ಲಿ ಎಂ .ಎ. ಪದವಿ ಪಡೆದರು.

**ಸ್ವಾರಸ್ಯ** – ನಾವು ಮನಸ್ಸು ಮಾಡಿದರೆ ಯಾವ ಆರ್ಥಿಕ ಪರಿಸ್ಥಿತಿಯನ್ನು ತೊಡಕೆಂದು ಭಾವಿಸದೆ ಸಾಧನೆ ಮಾಡಬಹುದು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**3.."ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗಿರುತ್ತಿದ್ದರು."**

**ಆಕರ–**

**ಸಂದರ್ಭ–** ರಾಧಾಕೃಷ್ಣನ್ ಅವರ ಭೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ಎಂದು ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಲಾಗಿದೆ. ರಾಧಾಕೃಷ್ಣನ್ ಅವರು ತಾವು ಪ್ರಾಧ್ಯಾಪಕ ಎಂಬ ಗತ್ತನ್ನು ತೋರದೆ ವಿದ್ಯಾರ್ಥಿಗಳೊಂದಿಗೆ ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗಿರುತ್ತಿದ್ದರು.

**ಸ್ವಾರಸ್ಯ–** ವಿದ್ಯಾರ್ಥಿಗಳೊಂದಿಗೆ ರಾಧಾಕೃಷ್ಣನ್ ಅವರ ಸ್ನೇಹಪೂರ್ವಕ ಬಾಂಧವ್ಯ, ನಿರಹಂಕಾರ ಮನೋಭಾವ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

**4."ಅಶೋಕನು ಕಳಿಂಗ ಯುದ್ಧದ ಅನಂತರ ಶ್ರೇಷ್ಠ ಮನುಷ್ಯನಾದಂತೆ ನೀವೂ ಆಗುವಿರಿ"**

**ಆಕರ–**

**ಸಂದರ್ಭ–** ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರಿಗೆ ನೀಡಿದ ಬೀಳ್ಕೊಡುಗೆ ಸಮಾರಂಭದಲ್ಲಿ ಸ್ಟಾಲಿನ್ ಅವರು ಭಾಷಣ ಮಾಡುವ ಸಂದರ್ಭದಲ್ಲಿ ರಾಧಾಕೃಷ್ಣನ್ ಅವರ ಪ್ರಥಮ ಭೇಟಿಯ ಮಾತುಗಳನ್ನು ಸ್ಮರಿಸಿದರು.

ಸ್ವಾರಸ್ಯ– ರಾಧಾಕೃಷ್ಣನ್ ಅವರ ಪ್ರಥಮ ಭೇಟಿಯ ಮಾತುಗಳಲ್ಲೇ ಸ್ಟಾಲಿನ್ ಅವರ ಮನಗೆದ್ದಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

**5."ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"**

ಆಕರ–

ಸಂದರ್ಭ– ರಾಧಾಕೃಷ್ಣನ್ ಅವರು ಕೆನಡಾದ ರೇಡಿಯೋ ಭಾಷಣ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಇಡಿ ವಿಶ್ವದಲ್ಲಿ ಶಾಂತಿ ಸೌಹಾರ್ದತೆ ನೆಲಸಬೇಕಾದರೆ ವಿಶ್ವದ ಪ್ರತಿಯೊಬ್ಬರು ಮಾನವತೆಯನ್ನು ಅನುಸರಿಸಬೇಕೆಂದು ಅವರು ತಮ್ಮ ಭಾಷಣದಲ್ಲಿ ಹೇಳಿದರು.

ಸ್ವಾರಸ್ಯ– ವಿಶ್ವದ ಸರ್ವ ಸಮಸ್ಯೆಗಳಿಗೂ ಮಾನವೀಯತೆ ಇಲ್ಲದಿರುವುದೇ ಕಾರಣ. ಆದ್ದರಿಂದ ಮಾನವೀಯತೆ ಹೊಂದಬೇಕೆಂಬುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

**ಪ್ರಶ್ನೆ ಉ– ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗೂ ನೀಡಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

**1.**ರಾಧಾಕೃಷ್ಣನ್ ಅವರ ಸಾಧನೆಯಲ್ಲಿ ವಿಶೇಷ ಸಹಕಾರ ನೀಡಿದವರು **ಪತ್ನಿ**

[ತಂದೆ, ತಾಯಿ, ಪತ್ನಿ, ಸಹೋದರಿ]

2.ಮದ್ರಾಸಿನ ಕ್ರಿಶ್ಚಿಯನ್ ಶಾಲೆಯಲ್ಲಿ ರಾಧಾಕೃಷ್ಣನ್ ಅವರು ಉತ್ತಮ ವಿದ್ಯಾರ್ಥಿ ಎಂದು ಪರಿಗಣಿಸ್ಪಟ್ಟ ವಿಷಯ **ತತ್ವಶಾಸ್ತ್ರ**

[ ಸಮಾಜಶಾಸ್ತ್ರ , ರಾಜ್ಯಶಾಸ್ತ್ರ, ಧರ್ಮಶಾಸ್ತ್ರ, ತತ್ವಶಾಸ್ತ್ರ ]

3.ರಾಧಾಕೃಷ್ಣನ್ ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯ **ಆಕ್ಸಫರ್ಡ್**

[ಬನಾರಸ್ ಕೇಂಬ್ರಿಜ್ , ಆಕ್ಸಫರ್ಡ್ ಉಸ್ಮಾನಿಯಾ ]

4." ಮಾನವತೆಯೇ ಅನುಸರಿಸಬೇಕಾದ ಮಾರ್ಗ" ಎಂದು ರಾಧಾಕೃಷ್ಣನ್ ಅವರು ರೇಡಿಯೋ ಪ್ರಸಾರ ಭಾಷಣ ಮಾಡಿದ ದೇಶ ಕೆನಡಾ

[ ಇಂಗ್ಲೆಂಡ್ , **ಕೆನಡಾ** , ಅಮೇರಿಕ, ರಷ್ಯಾ ]

5. ಭಾರತ ಮತ್ತು ರಷ್ಯಾದ ಬಾಂಧವ್ಯವನ್ನು ವೃದ್ಧಿಗೊಳಿಸಿದ ರಾಧಾಕೃಷ್ಣನ್ ಅವರನ್ನು ಪ್ರಶಂಸಿಸಿದವರು **ಜವಾಹರಲಾಲ್ ನೆಹರು**

[ಮಹಾತ್ಮಾಗಾಂಧಿ, ಜವಾಹರಲಾಲ್ ನೆಹರು, ಸ್ಟಾಲಿನ್, ಸಿ.ಇ.ಎಂ. ಜೋಡ್]

**ಪ್ರಶ್ನೆಊ ಹೊಂದಿಸಿ ಬರೆಯಿರಿ**

| | |
|---|---|
| 1. ಸ್ಟಾಲಿನ್ | ಮಾಸ್ಕೋ |
| 2. ಹರ್ಮನ್ಸ್ ಬರ್ಗ್ | ಮಿಷನರಿ ಶಾಲೆ |
| 3. ಭಾರತೀಯ ವಿದ್ಯಾಭವನ | ಬ್ರಹ್ಮ ವಿದ್ಯಾಭಾಸ್ಕರ |
| 4. ಆಕ್ಸಫರ್ಡ್ | ವಿಶ್ವವಿದ್ಯಾಲಯ |
| 5. ಸಪ್ಟೆಂಬರ್ 05 | ರಾಷ್ಟ್ರೀಯ ಶಿಕ್ಷಕರ ದಿನಾಚರಣೆ |